ಪ್ರಮಾಣ ವಚನ ಬೋಧಿಸಿದ ದಿನಾಂಕಃ **02.09.2025.**

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ವಾಟೀ ಸವಾಲುಃ 2 ರಿಂದ 4ನೇ ಪ್ರತಿವಾದಿಗಳ ಪರ ಶ್ರೀ ಆರ್.ಎಂ.ಕೆ. ವಕೀಲರಿಂದ**

ನಾರಾಯಣಪ್ಪನವರು ನನ್ನ ತಂದೆ. ಅವರಿಗೆ ಒಟ್ಟು ಐದು ಜನ ಮಕ್ಕಳು. ಅವರುಗಳೆಂದರೆ ವೆಂಕಟರಾಮಯ್ಯ, ಗೋವಿಂದರಾಜು, ರತ್ನಮ್ಮ, ಹನುಮಂತೇಗೌಡ ಮತ್ತು ಪುಷ್ಪವತಿ. ವೆಂಕಟರಾಮಯ್ಯನವರು **10**ನೇ ತರಗತಿಯಾದ ನಂತರ ವೃತ್ತಿ ತರಬೇತಿಯನ್ನು ಮಾಡಿ ಹೆಚ್.ಎಂ.ಟಿ. ಕಾರ್ಖಾನೆಯಲ್ಲಿ ತರಬೇತಿ ಪಡೆದು ನಂತರ ಮೈಕೋ ಕಾರ್ಖಾನೆಯಲ್ಲಿ **1979** ರಲ್ಲಿ ಕೆಲಸಕ್ಕೆ ಸೇರಿದರು. **1979** ರಲ್ಲಿ ಅವರು ರಾಮೇಶ್ವರದಲ್ಲಿ ವಾಸ ಮಾಡುತ್ತಿದ್ದರು. ನಂತರ **1981** ರಲ್ಲಿ ಬೆಂಗಳೂರಿಗೆ ಅವರ ವಾಸಸ್ಥಾನವನ್ನು ಬದಲಾಯಿಸಿದರು. ಅವರು **1980** ರಲ್ಲಿ ಮದುವೆಯಾಗಿರುತ್ತಾರೆ.

ಗೋವಿಂದರಾಜು ರವರು **10**ನೇ ತರಗತಿ ತನಕ ವಿದ್ಯಾಭ್ಯಾಸ ಮಾಡಿದ್ದರು. ಅವರು ವ್ಯವಸಾಯ ಮಾಡುತ್ತಿದ್ದರು. ಅದನ್ನು ಬಿಟ್ಟು ಬೇರೆ ಉದ್ಯೋಗ ಮಾಡುತ್ತಿರಲಿಲ್ಲ. ನಾನು **10**ನೇ ತರಗತಿಯ ತನಕ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ಸಹೋದರಿಯರಿಗೆ ಯಾವಾಗ ಮದುವೆಯಾಗಿದೆ ಎಂದರೆ ನೆನಪಿಲ್ಲ. ನಾವೆಲ್ಲಾ ಹುಟ್ಟಿದಾಗ್ಗಿನಿಂದ ಇಲ್ಲಿಯವರೆಗೂ ಒಟ್ಟು ಕುಟುಂಬದಲ್ಲಿಯೇ ಇದ್ದೇವೆ. ನನ್ನ ತಂದೆಯು ಹೆಚ್.ಎಂ.ಟಿ. ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು. ಗೋವಿಂದರಾಜು ಕೂಡ ವೃತ್ತಿ ತರಭೇತಿಯನ್ನು ಪಡೆದು ಹೆಚ್.ಎಂ.ಟಿ. ಕಾರ್ಖಾನೆಗೆ ಕೆಲಸಕ್ಕೆ ಹೋಗುತ್ತಿದ್ದರು ಎಂದರೆ ಸರಿಯಲ್ಲ.

ನನ್ನ ತಂದೆಯ ಅಣ್ಣ–ತಮ್ಮಂದಿರ ನಡುವೆ ಆದ ವಿಭಾಗದಲ್ಲಿ ಅವರಿಗೆ ಭಾಗ ಬಂದಿತ್ತು ಎಂದರೆ ಸರಿ. ನನ್ನ ತಂದೆಗೆ ಸುಮಾರು **4** ಆಸ್ತಿಗಳು ವಿಭಾಗದಲ್ಲಿ ಬಂದಿದ್ದವು. ಅವುಗಳ ಸರ್ವೆ ನಂಬರ್ ನೆನಪಿಲ್ಲ. ಅವುಗಳ ಪೈಕಿ ಮೂರು

ಆಸ್ತಿಗಳನ್ನು **1991** ರಲ್ಲಿ ಮಾರಾಟ ಮಾಡಿದ್ದೇವೆ. ಸದರಿ **4** ಆಸ್ತಿಗಳ ಒಟ್ಟು ವಿಸ್ತೀರ್ಣ ಎಷ್ಟು ಎಂದರೆ ಗೊತ್ತಿಲ್ಲ. ಮೂರು ಆಸ್ತಿಗಳನ್ನು ಮಾರಾಟ ಮಾಡಿದ ನಂತರ ನಮ್ಮ ಸ್ವಾಧೀನದಲ್ಲಿ ಈಗ ಒಟ್ಟು ಮೂರು ಆಸ್ತಿಗಳು ಉಳಿದಿವೆ. ಅವುಗಳೆಂದರೆ ಸರ್ವೆ ನಂ.**166/7** ಹಳೆ ಸರ್ವೆ ನಂ.**166/2** ರಲ್ಲಿ **2** ಎಕರೆ **28 1/2** ಗುಂಟೆ, ಸರ್ವೆ ನಂ.**89/2**ಬಿ ರಲ್ಲಿ **6** ಗಂಟೆ ಮತ್ತು ಸರ್ವೆ ನಂ.**166/6** ರಲ್ಲಿ **14** ಗುಂಟೆ. ಸದರಿ ಮೂರು ಆಸ್ತಿಗಳು ನಿಮ್ಮ ತಂದೆಗೆ ವಿಭಾಗದಲ್ಲಿ ಬಂದ ಆಸ್ತಿಗಳಾ? ಎಂದರೆ ಹೌದು. ಯಾವ ವರ್ಷ ವಿಭಾಗವಾಗಿದೆ ಎಂದರೆ ಗೊತ್ತಿಲ್ಲ.

ಸರ್ವೆ ನಂ.**166/7** ರ ಆಸ್ತಿಯು ನಿಮ್ಮ ತಂದೆಗೆ ವಿಭಾಗದ ಮೂಲಕ ಬಂದಿದೆಯಾ ಎಂದರೆ ನೆನಪಿಲ್ಲ. ಸದರಿ ಆಸ್ತಿಯು ಹೇಗೆ ಬಂತು ಎಂದರೆ ಸಾಕ್ಷಿಯು ಒಟ್ಟು ಕುಟುಂಬದ ಹಣದಿಂದ ಗೋವಿಂದರಾಜು ರವರ ಹೆಸರಿಗೆ ಕ್ರಯವಾಗಿದೆ ಎಂದು ಹೇಳುತ್ತಾರೆ. ಸದರಿ ಅಸ್ತಿಯನ್ನು **1981** ರಲ್ಲಿ ಖರೀದಿಸಲಾಗಿದೆ. ಸದರಿ ಆಸ್ತಿಯನ್ನು ಖರೀದಿಸುವ ಸಮಯದಲ್ಲಿ ಒಟ್ಟು ಕುಟುಂಬದ ಆದಾಯ ಎಷ್ಟು ಇತ್ತು ಎಂದು ನಿಮ್ಮ ಲಿಖಿತ ಹೇಳಿಕೆಯಲ್ಲಿ ತಿಳಿಸಿದ್ದೀರಾ ಎಂದರೆ ಹೌದು. ನಾನು ಈ ರೀತಿ ಯಾವುದೇ ಒಟ್ಟು ಕುಟುಂಬದ ವರಮಾನದ ಬಗ್ಗೆ ತಿಳಿಸದೇ ಇದ್ದರೂ ಕೂಡ ತಿಳಿಸಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಈ ಹಿಂದೆ ಏನಾದರೂ ಪ್ರಕರಣ ನಡೆದಿತ್ತಾ ಎಂದರೆ ಹೌದು. ಸದರಿ ದಾವೆಯ ಸಂಖ್ಯೆ ಮತ್ತು ಪಕ್ಷಗಾರರ ಹೆಸರು ನನಗೆ ನೆನಪಿಲ್ಲ. ಸದರಿ ದಾವೆಯಲ್ಲಿ ನಾನೂ ಕೂಡ ಪಕ್ಷಗಾರನಾಗಿದ್ದೆನು ಎಂದರೆ ಸರಿ. ಸದರಿ ದಾವೆಯನ್ನು ನಂಜಮ್ಮ ಹಾಕಿದ್ದರು ಎಂದರೆ ಸರಿ. ಸದರಿ ನಂಜಮ್ಮನವರು ವಾದಿಯರ ತಾಯಿ ಎಂದರೆ ಇರಬಹುದು. ಸದರಿ ದಾವೆಯಲ್ಲಿ ಏನು ತೀರ್ಪು ಬಂದಿದೆ ಎಂದರೆ ಗೊತ್ತಿಲ್ಲ. ನಾನು ಅದನ್ನು ತಿಳಿದುಕೊಳ್ಳುವ ಪ್ರಯತ್ನ ಇದುವರೆಗೂ ಮಾಡಿಲ್ಲ. ಸದರಿ ದಾವೆಗೆ ಸಂಬಂಧಿಸಿದಂತೆ ನಿಮ್ಮ ವಕೀಲರಿಗೆ ಮಾಹಿತಿ ತಿಳಿಸಿ ದಾಖಲೆಗಳನ್ನು ಕೊಟ್ಟಿದ್ದೀರಾ?ಎಂದರೆ ನೆನಪಿಲ್ಲ. ಸದರಿ ತೀರ್ಪಿನ ವಿರುದ್ದ ಮೇಲ್ಮನವಿ ಸಲ್ಲಿಸಿದ್ದೀರಾ? ಎಂದರೆ ಗೊತ್ತಿಲ್ಲ. ಸದರಿ ಮೇಲ್ಮನವಿಯಲ್ಲಿ ನೀವು ಪಕ್ಷಗಾರರಾಗಿದ್ದೀರಾ? ಎಂದರೆ

ಗೊತ್ತಿಲ್ಲ. ಸದರಿ ಮೇಲ್ಮನವಿಯಲ್ಲಿ ನನಗೆ ನೋಟೀಸ್ ಬಂದಿಲ್ಲ ಹಾಗೂ ನಾನು ವಕೀಲರನ್ನು ನೇಮಿಸಿಕೊಂಡಿಲ್ಲ. ಸದರಿ ಮೇಲ್ಮನವಿಯು ಏನಾಗಿದೆ ಎಂದರೆ ಗೊತ್ತಿಲ್ಲ. ಈ ಹಿಂದೆ ನಂಜಮ್ಮನವರು ಸಲ್ಲಿಸಿದ ದಾವೆ ಮತ್ತು ಮೇಲ್ಮನವಿಗೆ ನಾನೇ ಸೂತ್ರದಾರನಾಗಿದ್ದು, ಈ ಎಲ್ಲಾ ವಿಚಾರದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ಸರಿಯಲ್ಲ.

ನನ್ನ ತಂದೆಯು **1997** ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ಅಣ್ಣನಾದ ವೆಂಕಟರಾಮಯ್ಯನವರು **1997** ರ ನಂತರ ಮೃತಪಟ್ಟಿರುತ್ತಾರೆ. ನನ್ನ ತಂದೆ ಬದುಕಿದ್ದಾಗ ಕುಟುಂಬದ ಜವಾಬ್ದಾರಿಯನ್ನು ಅವರೇ ನಿರ್ವಹಿಸುತ್ತಿದ್ದರು ಎಂದರೆ ಸಾಕ್ಷಿಯು ನಾನು ಮತ್ತು ನನ್ನ ಅಣ್ಣ ನಮ್ಮ ತಂದೆಯೊಂದಿಗೆ ಸೇರಿ ಕುಟುಂಬದ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದೆವು ಎಂದು ಹೇಳುತ್ತಾರೆ. ನನ್ನ ತಂದೆ ಮೃತಪಟ್ಟ **6** ವರ್ಷದ ನಂತರ ವೆಂಕಟರಾಮಯ್ಯ ಮೃತಪಟ್ಟಿರುತ್ತಾರೆ. ಗೋವಿಂದರಾಜು ರವರು **2008** ರಲ್ಲಿ ಮೃತಪಟ್ಟಿರುತ್ತಾರೆ. **2008** ರ ನಂತರ ಕುಟುಂಬದ ಜವಾಬ್ದಾರಿಯನ್ನು ನಾನೇ ನಿರ್ವಹಿಸುತ್ತಿದ್ದೇನೆ. ವಿಭಾಗವಾಗಬೇಕೆಂದು ಯಾವಾಗ ತೀರ್ಮಾನ ಮಾಡಿಕೊಂಡಿದ್ದೀರಾ ಎಂದರೆ ಸಾಕ್ಷಿಯು ನಾವು ಯಾವಾಗಲೂ ಈ ರೀತಿ ತೀರ್ಮಾನ ಮಾಡಿಕೊಂಡಿಲ್ಲ, ಭಾಗಬೇಕೆಂದು ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದು ಹೇಳುತ್ತಾರೆ. ನಾನು ಭಾಗಬೇಕೆಂದು ನ್ಯಾಯಾಲಯಕ್ಕೆ ಬಂದಿಲ್ಲ ಎಂದರೆ ನಾನು ನೋಟೀಸ್ ಬಂದ ನಂತರ ಈ ಕೇಸಿಗೆ ಹಾಜರಾಗಿದ್ದೇನೆ ಎಂದು ಹೇಳುತ್ತಾರೆ. ವಾದಿಯರು ವೆಂಕಟರಾಮಯ್ಯನವರ ಮಕ್ಕಳು ಎಂದರೆ ಸರಿ. **2009** ರಲ್ಲಿ ವಾದಿಯರ ತಾಯಿ ನಂಜಮ್ಮ ಹಿಸ್ಸೆ ದಾವೆ ಹಾಕಿದ್ದರು ಎಂದರೆ ನೆನಪಿಲ್ಲ. ಅದರಲ್ಲಿ ನಾನು ಹಾಜರಾಗಿ ವಕೀಲರನ್ನು ನೇಮಿಸಿಕೊಂಡಿದ್ದೇನೆ ಎಂದರೆ ನೆನಪಿಲ್ಲ. ಸದರಿ ದಾವೆಯಲ್ಲಿ ನೀವೇನಾದರೂ ಭಾಗ ಕೇಳಿದ್ದೀರಾ ಎಂದರೆ ನೆನಪಿಲ್ಲ. ನಂಜಮ್ಮನವರು ಒಟ್ಟು ಕುಟುಂಬದ ಆಸ್ತಿಯಲ್ಲಿ ಭಾಗ ಬೇಕೆಂದು ಕೇಳಿದ್ದರು. ಸದರಿ ದಾವೆಯಲ್ಲಿ ನನಗೂ ಕೂಡ ಭಾಗ ಕೊಟ್ಟಿದ್ದಾರೆ ಎಂದರೆ ನೆನಪಿಲ್ಲ. ಅದೇ ರೀತಿ ನಂಜಮ್ಮ ಹಾಗೂ ಅವರ ಮಕ್ಕಳಿಗೂ ಕೂಡ ಭಾಗ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ದಾವೆಯ ತೀರ್ಪಿನ

ವಿರುದ್ದ ನೀವೇನಾದರೂ ಮೇಲ್ಮನವಿ ಸಲ್ಲಿಸಿದ್ದೀರಾ? ಎಂದರೆ ಇಲ್ಲ. ನಂಜಮ್ಮನವರು ಮೇಲ್ಮನವಿ ಸಲ್ಲಿಸಿದ್ದಾರೆ ಎಂದರೆ ಗೊತ್ತಿಲ್ಲ.

ನನ್ನ ಲಿಖಿತ ಹೇಳಿಕೆಯ ಪ್ಯಾರ ನಂ.9 ರಲ್ಲಿ ಈ ಹಿಂದೆ ವಿಭಾಗದ ದಾವೆ ನಡೆದ ಬಗ್ಗೆ ಹಾಗೂ ಮೇಲ್ಮನವಿ ಸಲ್ಲಿಸಿದ ಬಗ್ಗೆ ತಿಳಿಸಿದ್ದೇನೆ ಎಂದರೆ ನೆನಪಿಲ್ಲ. ಲಿಖಿತ ಹೇಳಿಕೆಯಲ್ಲಿ ಬರೆದಿರುವ ಅಂಶದ ಬಗ್ಗೆ ತಿಳಿದುಕೊಂಡಿದ್ದೀರಾ ಎಂದರೆ ನೆನಪಿಲ್ಲ. ಮುಂದಿನ ದಿನಾಂಕದಲ್ಲಿ ಲಿಖಿತ ಹೇಳಿಕೆಯ ಅಂಶವನ್ನು ವಕೀಲರ ಮೂಲಕ ತಿಳಿದುಕೊಂಡು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಬಹುದಾ? ಎಂದರೆ ಹೌದು.

**ಮುಂದುವರೆದ ಪಾಟೀ ಸವಾಲು 2 ರಿಂದ 4ನೇ ಪ್ರತಿವಾದಿಗಳ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.